ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 13.09.2024.
**ಮುಂದುವರೆದ ವಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಡಿ.ಎಸ್.ಎನ್. ವಕೀಲರಿಂದಃ

ನಿಪಿ-2ರ ಸಾಕ್ಷಿದಾರ ಸುದಾಮ ನನ್ನ ಗಂಡನ ಅಣ್ಣನಾಗಬೇಕು. ಅದೇ ರೀತಿ ಬನ್ನೆಪ್ಪ, ಮಹಾದೇವ, ಬಲಭೀಮ, ಶಿಶುಪಾಲ ನಮ್ಮ ಊರಿನವರು ಆಗಬೇಕು. ಮೇಲಿನವರ ವಿರುದ್ಧ ಪ್ರತಿವಾದಿ 2017ರಲ್ಲಿ ಒ.ಎಸ್.ನಂ.110/2017 ಅಂತ ಒಂದು ಕೇಸ್ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ಮೇಲಿನವರು ಪ್ರತಿವಾದಿ ಸ್ವತ್ತಿಗೆ ಯಾವುದೇ ಹರಕತ್ ಮಾಡಬಾರದು ಎಂದು ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಡಿಕ್ರಿ ಪ್ರಕಾರ ಮೇಲಿನವರ ವಿರುದ್ಧ ಅಮಲು

ಬಜಾವಣೆ ಅರ್ಜಿ ನಂ.2/2022 ಕೂಡಾ ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ನನ್ನ ಮತ್ತು ಬಾವ ರವರು ಇರುವ ಕಾರಣ ಆ ಸಿಟ್ಟನ್ನು ತಿರಿಸಿಕೊಳ್ಳುವ ಸಲುವಾಗಿ ಇಂತಹ ಒಂದು ದಾವೆಯನ್ನು ನನ್ನ ತಂದೆ ಕಡೆಯಿಂದ ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಈ ಮುಂಚೆ ಒಂದು ನೋಟೀಸ್ ಕೊಟ್ಟಿದ್ದರೂ ಕೂಡಾ ಅದನ್ನು ತೆಗೆದುಕೊಳ್ಳಲಾರದೇ ಇಂತಹ ಒಂದು ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪ್ರತಿವಾದಿ ಸ್ವತಃ ನಿಪಿ-2ರ ನೋಂದಣಿ ಕರಾರು ಪತ್ರ ಬರೆದುಕೊಟ್ಟಿರುತ್ತಾಳೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಸರ್ವೆ ದಾಖಲೆಯಾದ ನಂತರ ನೋಂದಣಿ ಕ್ರಯ ಪತ್ರ ಮಾಡಿಕೊಡುತ್ತಾರೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತುನ್ನು ಮಾರಾಟಕ್ಕೆ ತೆಗೆಯದೇ ಇರುವ ಕಾರಣ ಸರ್ವೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಕೇವಲ ರೂ.5 ಲಕ್ಷ ಮನೆ ಅಡೆಚಣೆ ಸಲುವಾಗಿ ನನ್ನ ತಂದೆಯನ್ನು ಕೇಳಿದಳು, ಅದಕ್ಕೆ ಆಧಾರವಾಗಿ ನಿಪಿ-2 ದಾಖಲಾತಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಾನು, ನನ್ನ ಗಂಡ, ನನ್ನ ತಂದೆ, ನನ್ನ ಬಾವ ಕೂಡಿಕೊಂಡು ನಿಪಿ-2ರಂತಹ ದಾಖಲೆಯನ್ನು ಪ್ರತಿವಾದಿ ಬರೆದುಕೊಟ್ಟಿರುತ್ತಾಳೆ ಎಂದು ಅವಳಿಗೆ ಮೋಸ ಮಾಡಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಕೂಡಾ ಪ್ರತಿವಾದಿ ತಾನು ತೆಗೆದುಕೊಂಡ ರೂ.5 ಲಕ್ಷ ಹಣವನ್ನು ನಮಗೆ ಕೊಡಲು ತಯಾರು ಇರುತ್ತಾರೆ ಎಂದರೆ, ಸಾಕ್ಷಿ ನಮಗೆ ಹೊಲ ಬರೆದುಕೊಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ನಿಪಿ-2ರಲ್ಲಿ ಪ್ರತಿವಾದಿ ಮೂರು ವರ್ಷದ ಒಳಗೆ ಸರ್ವೆ ದಾಖಲಾತಿಗಳನ್ನು ಸರಿಪಡಿಸಿ ಕೊಡಬೇಕೆಂಬ ಕರಾರು ಇತ್ತು ಎಂದರೆ, ಸಾಕ್ಷಿ ನಾವು ಅವಧಿ ನಂತರ ಕೇಳಲು ಹೋದಾಗ ನಾನು ಇರುತ್ತೇನೆ ಎಂದು ದಿನಮೇಕ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಆ ಅವಧಿಯಲ್ಲಿ ನಾವು ಕಾನೂನು ಬದ್ಧ ನೋಟೀಸ್ ಕೊಟ್ಟಿರುತ್ತೇವೆ, ಆದರ ಅವರ ತೆಗೆದುಕೊಂಡಿರುವುದಿಲ್ಲ. ನಾನು ವಕೀಲರ ಮುಖಾಂತರ ನೋಟೀಸ್ ಕೊಟ್ಟಿರುತ್ತೇವೆ, ಯಾವ ವಕೀಲರು ಎಂದು ನನಗೆ ಗೊತ್ತಿಲ್ಲ, ನನ್ನ ತಂದೆಗೆ ಗೊತ್ತು. ಸದರಿ ನೋಟೀಸ್ ಕೊಟ್ಟು 3-4 ವರ್ಷವಾಗಿರುತ್ತದೆ. ನಾನು ಹೇಳುಂವತೆ ಯಾವುದೇ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ._

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**